# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1024 (2166) |
| **ಸದಸ್ಯರ ಹೆಸರು** | : | ಶ್ರೀ ಟಿ.ಎನ್. ಜವರಾಯಿಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 26-03-2026 |
| **ಉತ್ತರಿಸಬೇಕಾದ ಸಚಿವರು** | : | ಉಪ ಮುಖ್ಯಮಂತ್ರಿಯವರು |

* * * * *

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಾವೇರಿ 5ನೇ ಹಂತದ ಯೋಜನೆ ಜಾರಿಯಾಗಿ ವರ್ಷ ಕಳೆದರೂ ಸಹ ಇನ್ನು 110 ಹಳ್ಳಿಗಳ ವ್ಯಾಪ್ತಿಯಲ್ಲಿ ಪೂರ್ಣ ಪ್ರಮಾಣದ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸಾಧ್ಯವಿಲ್ಲದಿರುವುದು ಹಾಗೂ ಇನ್ನು 10-15 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಕಾಮಗಾರಿಯು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರಣೆ ನೀಡುವುದು)</td><td>
<ul>
<li>ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.</li>
<li>110 ಹಳ್ಳಿಗಳಿಗೆ ಒಳಚರಂಡಿ ವ್ಯವಸ್ಥೆ (ಲ್ಯಾಟರಲ್ಸ್) ಒದಗಿಸುವ ಯೋಜನೆಯಡಿಯಲ್ಲಿ ಸದರಿ ಯೋಜನೆ ಅಡಿಯಲ್ಲಿ ಒಟ್ಟು 101 ಹಳ್ಳಿಗಳಲ್ಲಿ ಲ್ಯಾಟರಲ್ಸ್ ಕೊಳವೆಗಳನ್ನು ಅಳವಡಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು, ಸದರಿ ಲ್ಯಾಟರಲ್ಸ್‌ಗಳನ್ನು ಮುಖ್ಯ ಮತ್ತು ಉಪಮುಖ್ಯ ಕೊಳವೆಗಳಿಗೆ ಜೋಡಣೆ ಮಾಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಕೊಂಡೊಯ್ಯಲು ಜೈಕಾ ಆರ್ಥಿಕ ನೆರವಿನ ಕಾವೇರಿ 5ನೇ ಹಂತದ ಯೋಜನೆ ಅಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.</li>
<li>ಆರ್ಥಿಕ ನೆರವಿನ ಕೊರತೆ, ಹೊಸ ಪ್ರದೇಶಗಳ ಸೇರ್ಪಡೆ / ಬಿಟ್ಟು ಹೋಗಿರುವ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ 2ನೇ ಹಂತದಲ್ಲಿ ವಿಶ್ವಬ್ಯಾಂಕ್ ನೆರವಿನ ಜಲಭದ್ರತಾ ವಿಪತ್ತು ಯೋಜನೆ ಅಡಿಯಲ್ಲಿ ಕಾಮಗಾರಿಯನ್ನು ತೆಗೆದುಕೊಂಡಿದ್ದು, 2028ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿರುತ್ತದೆ.</li>
<li>ಕಾವೇರಿ 5ನೇ ಹಂತದ ಯೋಜನೆಯಡಿ 110 ಹಳ್ಳಿಗಳ ಪೈಕಿ 100 ಹಳ್ಳಿಗಳಿಗೆ ನೀರು ಸಂಪರ್ಕ ಕಲ್ಪಿಸುವ ಪ್ರಕ್ರಿಯೆ ಸಂಪೂರ್ಣವಾಗಿ ಪೂರ್ಣಗೊಂಡಿದ್ದು, ಉಳಿದ 10 ಹಳ್ಳಿಗಳಿಗೆ ಈ ಕೆಳಕಂಡ ಕಾರಣಗಳಿಂದಾಗಿ ಕಾಮಗಾರಿಗಳು ವಿಳಂಬವಾಗಿರುತ್ತವೆ.</li>
</ul>
<table>
<tr><th>ವಲಯದ ಹೆಸರು</th><th>ವಿಳಂಬಕ್ಕೆ ಕಾರಣಗಳು</th></tr>
<tr><td>ಮಹದೇವಪುರ</td><td>ಈ ವಲಯದ 5 ಹಳ್ಳಿಗಳಾದ ಸೊರಹುಣಸೆ, ವರ್ತೂರು, ಗುಂಜೂರು, ಬಳಗೆರೆ ಮತ್ತು ಭಾಗಶಃ ಪಣತ್ತೂರು ಹಳ್ಳಿಗಳಿಗೆ ನೀರಿನ ಕೊಳವೆಗಳನ್ನು ಅಳವಡಿಸಲಾಗಿದ್ದು, ಈ ಕೆಳಕಂಡ ಕಾರಣಗಳಿಂದಾಗಿ ಚಾಲನೆಗೊಳಿಸಿರುವುದಿಲ್ಲ.
<ul><li>ಕೆ.ಆರ್.ಡಿ.ಸಿ.ಎಲ್ ವತಿಯಿಂದ ವರ್ತೂರು ಹೊಸ ಸೇತುವೆಯಿಂದ ವರ್ತೂರು</li></ul></td></tr>
</table>
</td></tr>
</table>

| | | | |
|---|---|---|---|
| | | | ಪೊಲೀಸ್ ಸ್ಟೇಷನ್ ರವರೆಗೆ ರಸ್ತೆಯನ್ನು 60 ಅಡಿಯಿಂದ 100 ಅಡಿಯವರೆಗೆ ವಿಸ್ತರಣೆ ಮಾಡುವ ಕಾರ್ಯವು ನಡೆಯುತ್ತಿರುವುದರಿಂದ.<br>• ಎಲಿವೇಟೆಡ್ ಕಾರಿಡಾರ್ ಕಾಮಗಾರಿ ಪ್ರಗತಿಯಲ್ಲಿರುವುದರಿಂದ. |
| | | **ಬ್ಯಾಟರಾಯನಪುರ** | ಈ ವಲಯದ 5 ಹಳ್ಳಿಗಳಾದ ಕಟ್ಟಿಗೇನಹಳ್ಳಿ, ಶ್ರೀನಿವಾಸಪುರ, ಬೆಳ್ಳಹಳ್ಳಿ, ತಿರುಮೇನಹಳ್ಳಿ, ಭಾಗಶಃ ಚೊಕ್ಕನಹಳ್ಳಿ, ಹಳ್ಳಿಗಳಿಗೆ ನೀರಿನ ಕೊಳವೆಗಳನ್ನು ಅಳವಡಿಸಿದ್ದು, ಸದರಿ ಪ್ರದೇಶಗಳಿಗೆ ಚೊಕ್ಕನಹಳ್ಳಿ ಜಲಸಂಗ್ರಹಗಾರ ಕಾಮಗಾರಿ ಪೂರ್ಣಗೊಂಡ ನಂತರ ನೀರು ಪೂರೈಸಲಾಗುವುದು. ಪ್ರಸ್ತುತ, ಚೊಕ್ಕನಹಳ್ಳಿ ಜಲಸಂಗ್ರಹಗಾರಕ್ಕೆ ಸಂಬಂಧಿಸಿದ ಸ್ಥಳದ ಪ್ರಕರಣವು ನ್ಯಾಯಾಲಯದಲ್ಲಿ 2025ರಲ್ಲಿ ಇತ್ಯರ್ಥಗೊಂಡಿದ್ದು, ಜಲಸಂಗ್ರಹಗಾರ ನಿರ್ಮಾಣದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| **ಆ)** | 5ನೇ ಹಂತದ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ವಿಶ್ವ ಬ್ಯಾಂಕ್ ನೆರವಿನ ಯೋಜನೆಯಡಿ ಕರ್ನಾಟಕ ಜಲಭದ್ರತಾ ಮತ್ತು ವಿಪತ್ತು ನಿರ್ವಹಣೆ ಯೋಜನೆಯಡಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆಯೇ; (ಆಗಿಲ್ಲದಿದ್ದರೆ, ಸದ್ಯ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ ನೀಡುವುದು) | ಕಾವೇರಿ 5ನೇ ಹಂತದ ಯೋಜನೆ ಅಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳು ಹಾಗೂ ವಿಶ್ವ ಬ್ಯಾಂಕ್ ನೆರವಿನ ಯೋಜನೆಯಡಿ ಕರ್ನಾಟಕ ಜಲಭದ್ರತಾ ಮತ್ತು ವಿಪತ್ತು ನಿರ್ವಹಣೆ ಯೋಜನೆಯಡಿ ತೆಗೆದುಕೊಂಡಿರುವ ಕಾಮಗಾರಿಗಳ ಪ್ರಸ್ತುತ ಹಂತದ ವಿವರಗಳನ್ನು **ಅನುಬಂಧ-1 ಮತ್ತು ಅನುಬಂಧ-2ರಲ್ಲಿ** ಒದಗಿಸಲಾಗಿದೆ. | |
| **ಇ)** | ಈ ಕಾಮಗಾರಿಗಳನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಲಾಗುವುದು; ಈ ಕಾಮಗಾರಿಗಾಗಿ ಒಟ್ಟಾರೆಯಾಗಿ ಇಲ್ಲಿಯವರೆಗೆ ಖರ್ಚು ಮಾಡಿರುವ ಮೊತ್ತವೆಷ್ಟು? (ವಿವರ ನೀಡುವುದು) | | |

**ಸಂಖ್ಯೆ:** ನಅಇ 124 ಎಂಎಸ್‌ಐ 2026(ಇ)

**(ಡಿ ಕೆ ಶಿವಕುಮಾರ್)**
**ಉಪ ಮುಖ್ಯಮಂತ್ರಿ**

ಅನುಬಂಧ-1

## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕಾವೇರಿ 5ನೇ ಹಂತದ ಯೋಜನೆ ಅಡಿಯಲ್ಲಿ ತೆಗೆದುಕೊಂಡಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಪ್ರಗತಿಯ ವಿವರ

| ಕ್ರ ಸಂ | ತ್ಯಾಜ್ಯ ನೀರು ಸಂಸ್ಕರಣಾ ಘಟಕ | ಸಾಮರ್ಥ್ಯ (ಎಂಎಲ್‌ಡಿ) | ಗುತ್ತಿಗೆ ನೀಡಿರುವ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) | ಪ್ರಸ್ತುತ ವೆಚ್ಚ (ರೂ. ಕೋಟಿಗಳಲ್ಲಿ) | ಷರಾ |
|---|---|---|---|---|---|
| 1 | ತಲಘಟ್ಟಪುರ | 5 | 42.93 | 32.74 | ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಗತ ಹಂತದಲ್ಲಿರುತ್ತದೆ |
| 2 | ಪಿಲ್ಲಗಾನಹಳ್ಳಿ | 4 | 41.04 | 28.72 | ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಗತ ಹಂತದಲ್ಲಿರುತ್ತದೆ |
| 3 | ವರ್ತೂರು | 25 | 95.25 | 0.00 | ಘಟಕ ನಿರ್ಮಾಣ ಸ್ಥಳ ಸಂಬಂಧಿತ ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಆದುದ್ದರಿಂದ, ಕಾಮಗಾರಿಯನ್ನು ಈವರೆಗೂ ತೆಗೆದುಕೊಂಡಿರುವುದಿಲ್ಲ |
| 4 | ಜಕ್ಕೂರು | 7 | 31.27 | 28.47 | ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಗತಗೊಳಿಸಲಾಗಿದೆ. |
| 5 | ಯಲಹಂಕ ಕೆರೆ | 6 | 38.29 | 31.03 | ಜುಲೈ 2026 ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. |
| 6 | ದೊಡ್ಡಬೆಟ್ಟಹಳ್ಳಿ | 7 | 36.30 | 29.46 | ಜುಲೈ 2026 ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. |
| 7 | ಬಿಳಿಶಿವಾಲೆ | 17 | 61.61 | 47.87 | ಜುಲೈ 2026 ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು |
| 8 | ಹೆಮ್ಮಿಗೆಪುರ | 13 | 37.08 | 32.07 | ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಗತ ಹಂತದಲ್ಲಿರುತ್ತದೆ. |
| 9 | ಹೇರೋಹಳ್ಳಿ | 3 | 25.02 | 11.56 | ಜುಲೈ 2026 ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. |
| 10 | ಸೋಂಪುರ | 8 | 30.58 | 12.99 | ಜುಲೈ 2026 ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. |
| 11 | ನಾಗಸಂದ್ರ | 9 | 39.00 | 33.66 | ಕಾಮಗಾರಿ ಪೂರ್ಣಗೊಂಡಿದ್ದು, ಕಾರ್ಯಗತ ಹಂತದಲ್ಲಿರುತ್ತದೆ. |
| 12 | ಕರಿಓಬನಹಳ್ಳಿ | 10 | 36.69 | 30.94 | ಜುಲೈ 2026 ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. |
| 13 | ಹೊಸಹಳ್ಳಿ | 6 | 27.51 | 16.13 | ಜುಲೈ 2026 ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. |
| 14 | ಚಿಕ್ಕಬಾಣಾವರ | 4 | 26.67 | 15.35 | ಜುಲೈ 2026 ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು. |

ಮುಖ್ಯ ಅಭಿಯಂತರರು(ಯೋಜನೆ)
ಬೆಂಗಳೂರು ಜಲಮಂಡಳಿ

# ಅನುಬಂಧ-2

## ಕರ್ನಾಟಕ ಜಲಭದ್ರತಾ ವಿಪತ್ತು ಯೋಜನೆಯಡಿ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ

| ಕ್ರ ಸಂ | ವಲಯ | ಪ್ಯಾಕೇಜ್ | ತ್ಯಾಜ್ಯ ನೀರು ಸಂಸ್ಕರಣಾ ಘಟಕ | ಸಾಮರ್ಥ್ಯ (ಎಂ.ಎಲ್.ಡಿ) | ಒಳಚರಂಡಿ ಕೊಳವೆ ಮಾರ್ಗ (ಕಿಮೀ) | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) | ಪ್ರಸ್ತುತ ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|---|---|---|---|---|
| 1 | ಆರ್. ಆರ್ ನಗರ & ದಾಸರಹಳ್ಳಿ | 1 | ಅಬ್ಬಿಗೆರೆ | 5 | 69 | 128.80 | 10.39 |
| 2 | ಬ್ಯಾಟರಾಯನ ಪುರ | 2ಎ | ಕೋಗಿಲು | 15 | – | 92.05 | 5.38 |
| | | 2ಬಿ | – | – | 193 | 232.90 | 23.43 |
| 3 | ಬೊಮ್ಮನಹಳ್ಳಿ | 3 | ಅಂಜನಾಪುರ | 35 | 77 | 470.20 | 33.14 |
| | | | ಯು.ಎಂ. ಕಾವಲ್ | 10 | | | |
| | | | ಇಬ್ಬಲೂರು | 5 | | | |
| | | | ಹುಳಿಮಾವು | 15 | | | |
| | | 4 | ಚಿಕ್ಕಬೇಗೂರು | 15 | 11.5 | 232.05 | 16.51 |
| | | | ಸೌಕ್ಕೆರೆ | 28 | | | |
| 4 | ಮಹಾದೇವಪುರ | 5 | ಚನ್ನಸಂದ್ರ | 20 | 42 | 167.47 | 10.97 |

**ಮೇಲೆ ತಿಳಿಸಿರುವ ಎಲ್ಲಾ ಕಾಮಗಾರಿಗಳನ್ನು ಫೆಬ್ರವರಿ 2028ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.**

ಮುಖ್ಯ ಅಭಿಯಂತರರು(ಯೋಜನೆ)
ಬೆಂಗಳೂರು ಜಲಮಂಡಳಿ